“ಅಜ್ಜಿ, ನಾನು ‘ಬೆಲ್ಲ್ ಆಂಡ್ ಡ್ರ್ಯಾಗನ್’ ಹೋಟೆಲನ್ನು ಹುಡುಕಿಕೊಂಡು ಹೊರಟಿದ್ದೆ. ಕಿಟಕಿಯ ಹೊರಗೆ ನಿಮ್ಮ ಫಲಕವನ್ನು ನೋಡಿ ಬಂದೆ.” ಅವನು ಹೇಳಿದ.

“ಮಗಾ, ನಡೆದು ನಡೆದು ನಿನಗೆ ಸುಸ್ತಾಗಿರಬೇಕು. ಹೊರಗೆ ಬೇರೆ ತುಂಬಾ ಚಳಿ. ಬಾ, ಸ್ವಲ್ಪ ಹೊತ್ತು ಬೆಂಕಿ ಕಾಯಿಸಿಕೊ. ಬೆಚ್ಚಗಾಗುತ್ತದೆ.”

“ಮೊದಲು ನಿಮ್ಮ ಬಾಡಿಗೆ ಎಷ್ಟು ಅಂತ ಹೇಳಿ ಅಜ್ಜಿ.”

“ಜಾಸ್ತಿ ಇಲ್ಲ ಮಗಾ, ಒಂದು ರಾತ್ರಿಗೆ ಆರು ಪೆನ್ಸ್ ಅಷ್ಟೇ. ಉಪಹಾರವೂ ಸೇರಿ.”

ಬಿಲ್ಲಿ ವೀವರನಿಗೆ ಇದು ತುಂಬಾನೆ ಅಗ್ಗವೆನಿಸಿತು. ಅವನು ಅಂದಾಜಿಸಿದ್ದ ಮೊತ್ತಕ್ಕಿಂತಲೂ ಶೇಕಡಾ ಐವತ್ತರಷ್ಟು ಅಗ್ಗ!

“ಆರು ಪೆನ್ಸೂ ಜಾಸ್ತಿ ಅಂತ ಅನಿಸಿದರೆ, ಸ್ವಲ್ಪ ಕಡಿಮೆ ಮಾಡುತ್ತೇನೆ ಮಗ. ಉಪಹಾರಕ್ಕೆ ನೀನು ಏನು ತಿನ್ನುತ್ತೀಯಾ ಹೇಳು? ಇತ್ತೀಚೆಗೆ ಈ ಮೊಟ್ಟೆಗಳ ದರ ಜಾಸ್ತಿಯಾಗಿದೆ ನೋಡು...”

“ಇಲ್ಲ ಅಜ್ಜಿ. ನನಗೆ ಬಾಡಿಗೆಯ ಕುರಿತು ಯಾವುದೇ ತಕರಾರುಗಳಿಲ್ಲ. ಆರು ಪೆನ್ಸೇ ಕೊಡುತ್ತೇನೆ.”

“ನನ್ನ ಬಾಡಿಗೆ ಖಂಡಿತ ನಿನಗೆ ದುಬಾರಿ ಅನಿಸೋದಿಲ್ಲ ಅಂತ ಗೊತ್ತಿತ್ತು ಮಗ.”

ಬಿಲ್ಲಿ ವೀವರನಿಗೆ ಮುದುಕಿ ತುಂಬಾ ವಾತ್ಸಲ್ಯಮಯಿಯಂತೆ ಕಂಡಳು. ಕ್ರಿಸ್ಮಸ್ ರಜೆಯಲ್ಲಿ ಅವನ ಸ್ನೇಹಿತನ ಊರಿಗೆ ಹೋಗಿದ್ದು ಅವನ ನೆನಪಿಗೆ ಬಂದಿತು. ಅವನ ಸ್ನೇಹಿತನ ತಾಯಿ ಕೂಡ ಅವನನ್ನು ಹೀಗೆಯೇ ಸ್ವಾಗತಿಸಿದ್ದಳು.

ಅವನು ತಲೆಯ ಮೇಲಿಂದ ಹ್ಯಾಟನ್ನು ತೆಗೆಯುತ್ತಿದ್ದಂತೆ ಮುದುಕಿ ಮುಂದೆ ಬಂದು, “ಇಲ್ಲಿ ಕೊಡು ಮಗ. ನಾನು ಹ್ಯಾಂಗರಿಗೆ ಸಿಕ್ಕಿಸುತ್ತೇನೆ.” ಎಂದು ಅವನ ಕೋಟು ಕಳಚಲು ನೆರವಾದಳು.

ಹಾಲಿನಲ್ಲಿ ಅವನಿಗೆ ಬೇರೆ ಯಾರ ಹ್ಯಾಟು, ಕೋಟು, ಛತ್ರಿಗಳೂ ಕಾಣಿಸಲಿಲ್ಲ. ಬೀರು ಖಾಲಿ ಹೊಡೆಯುತ್ತಿತ್ತು.

“ನಾನು ಮತ್ತು ನೀನು ಬಿಟ್ಟರೆ ಇಲ್ಲಿ ಬೇರೆ ಯಾರೂ ಇಲ್ಲ!” ಬಿಲ್ಲಿಗೆ ಮಹಡಿಯ ಮೇಲಿನ ಕೊಠಡಿಯನ್ನು ತೋರಿಸಲು ಕರೆದುಕೊಂಡು ಹೋಗುತ್ತಿದ್ದಾಗ ಮುದುಕಿ ಹೇಳಿದಳು. “ನನಗೆ ಅತಿಥಿಗಳು ಇತ್ತೀಚೆಗೆ ತುಂಬಾನೆ ಕಡಿಮೆಯಾಗಿದ್ದಾರೆ.”

‘ಮುದುಕಿ ಮಾನಸಿಕವಾಗಿ ಸರಿಯಾಗಿದ್ದಾಳೆ ತಾನೆ?’ ಅವನಿಗೆ ಸಂಶಯ ಕಾಡತೊಡಗಿತು.

‘ಆದರೆ ನನಗೇನಂತೆ? ಬರೇ ಆರು ಪೆನ್ಸ್!’ ಅವನು ಸಮಾಧಾನ ಮಾಡಿಕೊಂಡ.

“ಅಜ್ಜಿ, ಈ ಬಾಡಿಗೆಗೆ ಇಲ್ಲಿ ಜನ ಮುಗಿಬೀಳಬೇಕಿತ್ತು!” ಅವನು ಆಶ್ಚರ್ಯಪಟ್ಟ.

“ಅದು ಜನರ ಸಮಸ್ಯೆಯಲ್ಲ ಮಗ. ಸಮಸ್ಯೆ ನನ್ನದು. ಗಿರಾಕಿಗಳು ಬರಲಿ ಎಂದು ನಾನು ಹಾಗೆಲ್ಲಾ ಎಲ್ಲರನ್ನೂ ಬರಮಾಡಿಕೊಳ್ಳುವುದಿಲ್ಲ. ನನಗೆ ಸರಿ ಕಂಡವರನ್ನು ಮಾತ್ರ ಸೇರಿಸಿಕೊಳ್ಳುತ್ತೇನೆ. ನಿನಗೆ ಅರ್ಥವಾಗುತ್ತದೆ ಎಂದು ಭಾವಿಸುತ್ತೇನೆ.” ಎಂದಳು.

“ಅರ್ಥವಾಯಿತು ಅಜ್ಜಿ.” ಎಂದ ಬಿಲ್ಲಿ.

“ಆದರೂ ನಾನು ಯಾವಾಗಲೂ ಸಿದ್ಧಳಾಗಿಯೇ ಇರುತ್ತೇನೆ. ನನಗೆ ಪಸಂದಾಗುವ ಗಿರಾಕಿ ಯಾವಾಗ ಬರುತ್ತಾನೆ ಅಂತ ಹೇಗೆ ಗೊತ್ತಾಗಬೇಕು... ಅಲ್ವೇ? ಆದ್ದರಿಂದ ನನ್ನ ಮನೆಯಲ್ಲಿ ಎಲ್ಲವೂ ಯಾವ ಹೊತ್ತಿನಲ್ಲೂ ಸಿದ್ಧವಾಗಿರುತ್ತದೆ. ಯಾವತ್ತಾದರೊಂದು ದಿನ ಗಿರಾಕಿಯೊಬ್ಬ ವಸತಿ ಕೇಳಿಕೊಂಡು ನನ್ನ ಮನೆಗೆ ಬಂದು ಕರೆಗಂಟೆಯನ್ನೊತ್ತಿದಾಗ ನಾನು ಬಾಗಿಲು ತೆರೆದಾಗ ಅವನು ಇಷ್ಟಪಡುವವನಾಗಿದ್ದರೆ ಎಷ್ಟೊಂದು ಸಂತೋಷವಾಗುತ್ತದೆ ಗೊತ್ತೇನು? ಅದು ವಿವರಿಸಲು ಅಸಾಧ್ಯ!” ಎನ್ನುತ್ತಾ ಮೆಟ್ಟಿಲುಗಳ ಕಟಕಟೆಯನ್ನು ಗಟ್ಟಿಯಾಗಿ ಹಿಡಿದು ಅವಳು ಹಿಂದಿದ್ದ ಬಿಲ್ಲಿ ವೀವರನ ಕಡೆಗೆ ತಿರುಗಿದಳು. ಅವನ ಕಣ್ಣುಗಳಿಗೆ ತನ್ನ ನೀಲಿ ಕಣ್ಣುಗಳನ್ನು ಸೇರಿಸುತ್ತಾ ಮುದುಕಿ,